# ರಾಜ್ಯ ಶೈಕ್ಷಣಿಕ ಸಂಶೋಧನ ಹಾಗೂ ಪ್ರಶಿಕ್ಷಣ ಪರಿಷದ್, ಮಹಾರಾಷ್ಟ್ರ, ಪುಣೆ

## ನಿಪುಣ ಭಾರತ - ಅಧ್ಯಯನ ಅಭ್ಯಾಸ ಸರ್ವೇಕ್ಷಣ

## ವಿಷಯ - ಪ್ರಥಮ ಭಾಷೆ (ಕನ್ನಡ) ಐದನೆಯ ತರಗತಿ

**ಅಧ್ಯಯನ ನಿಷ್ಪತ್ತಿ ಕ್ರ. ೧ :** ಪರಿಚಿತ ಸಂಗತಿ, ಕಥೆ/ಕವಿತೆ ಇತ್ಯಾದಿ ವಿಷಯಗಳ ಸಂಭಾಷಣೆ ಮಾಡುವದು, ಪ್ರಶ್ನೆ ಕೇಳುವದು, ವಿಷಯ, ಚಿತ್ರ ಮತ್ತು ಪಾತ್ರಗಳ ಬಗ್ಗೆ ಅಭಿಪ್ರಾಯ ವ್ಯಕ್ತ ಮಾಡುವದು, ಪರಿಚಿತ ಇರುವ ಕವಿತೆ, ಕಥೆಗಳ ಬಗ್ಗೆ ಪ್ರಶ್ನೆ ಕೇಳುವದು ಮತ್ತು ಅದರಲ್ಲಿಯ ಪಾತ್ರಗಳು ಹಾಗೂ ಕಥೆಯ ಸಂದರ್ಭದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವದು. (LM 410)

**ಶಿಕ್ಷಕರ ಸಲುವಾಗಿ ಸೂಚನೆ :**

- ಶಿಕ್ಷಕರು ಮಕ್ಕಳಿಗೆ ಕವಿತೆಯನ್ನು ಸ್ವರಯುಕ್ತ ಹಾಗೂ ಲಯಬದ್ಧವಾಗಿ ಹಾಡಿ ತೋರಿಸಬೇಕು.
- ಕವಿತೆ ಹೇಳುವ ಮೊದಲು ಮಕ್ಕಳಿಗೆ ಲಕ್ಷ್ಯಪೂರ್ವಕ ಕೇಳಲು ಸೂಚನೆ ಕೊಡುವದು. ಅದರ ಮೇಲಿನ ಪ್ರಶ್ನೆಗಳನ್ನು ಕೇಳಬೇಕು.
- ಪ್ರತಿಯೊಬ್ಬ ಮಗುವಿಗೆ ಕವಿತೆಯನ್ನು ಸ್ವತಂತ್ರವಾಗಿ ಹೇಳುವದು. ನಂತರ ಕವಿತೆಗೆ ಸಂಬಂಧಿಸಿದ ಮುಂದಿನ ಪ್ರಶ್ನೆಗಳನ್ನು ಕೇಳಿರಿ.
- ಒಂದು ಪ್ರಶ್ನೆಯ ಉತ್ತರ ಕೊಡುವ ಸಲುವಾಗಿ ವಿದ್ಯಾರ್ಥಿಗಳಿಗೆ ೧೦ ಸೆಕೆಂಡುಗಳವರೆಗೆ ಸಮಯ ಕೊಡಿರಿ. ಒಂದು ವೇಳೆ ವಿದ್ಯಾರ್ಥಿಯೊಬ್ಬ ಪ್ರಶ್ನೆಗಳಿಗೆ ೧೦ ಸೆಕೆಂಡುಗಳಲ್ಲಿ ಉತ್ತರ ಕೊಡಲು ಶಕ್ಯವಿಲ್ಲದಿದ್ದಾಗ ಮುಂದಿನ ಪ್ರಶ್ನೆಗಳನ್ನುಕೇಳಿರಿ.

**ಕವಿತೆ ವಾಚನ :**

ಕನ್ನಡಾಂಬೆಯ ಹಿರಿಮೆ, ನಾನೆನಿತು ಬಣ್ಣಿಸಲಿ.
ಹಾರುತಿಹುದು ಕೇತನ, ಪಟಪಟನೆ ಗಗನದಲಿ ॥

ಹಸಿರು ಮುರಿಯುವ ಪೈರು, ಮನುಜನಾತ್ಮದ ಉಸಿರು.
ಸಾಹಿತ್ಯ ಶಿಲ್ಪಕಲೆ ತವರು, ಹಂಪೆ... ಐಹೊಳೆ... ಬಿಜಾಪೂರ ॥

ಶ್ರೀಗಂಧ ಸುಗಂಧದ ಕಂಪು, ಬೆಂದ ಹೃದಯಕ್ಕೆ ತಂಪು
ದಾಸರ ಶರಣರ ಪೆಂಪು, ಆಲಿಪ ಮನಕೆ ಬಲು ಇಂಪು ॥

| ಪ್ರಶ್ನೆ | ಉತ್ತರ |
|---|---|
| ೧) ಯಾರ ಹಿರಿಮೆ ಬಣ್ಣಿಸಲಾಗಿದೆ ? | ಕನ್ನಡಾಂಬೆ |
| ೨) ಕೇತನ ಎಲ್ಲಿ ಹಾರುತ್ತಿದೆ ? | ಗಗನದಲ್ಲಿ |
| ೩) ಸಾಹಿತ್ಯ, ಶಿಲ್ಪಕಲೆ ತವರೂರು ಯಾವವು ? | ಹಂಪೆ... ಐಹೊಳೆ... ಬಿಜಾಪುರ |
| ೪) ಯಾವುದರ ಕಂಪು ಬೀರುವದು ? | ಶ್ರೀಗಂಧ ಸುಗಂಧದ ಕಂಪು |
| ೫) ಬೆಂದ ಹೃದಯಕ್ಕೆ ಯಾವುದು ತಂಪು ಅನಿಸುವದು ? | ದಾಸರ, ಶರಣರ ಪೆಂಪು,<br>ಬೆಂದ ಹೃದಯಕೆ ತಂಪು. |

**ಮೂಲ್ಯಾಂಕನ ರುಬ್ರಿಕ್ :**

| ವಿವರಣೆ | ಶ್ರೇಣಿ |
|---|---|
| ಕವಿತೆ ಕೇಳದ ನಂತರ ೪ ರಿಂದ ೫ ಪ್ರಶ್ನೆಗಳಿಗೆ ಉತ್ತರ ಕೊಡುವನು/ಕೊಡುವಳು. | ೩ |
| ಕವಿತೆ ಕೇಳದ ನಂತರ ೨ ರಿಂದ ೩ ಪ್ರಶ್ನೆಗಳಿಗೆ ಯೋಗ್ಯ ಉತ್ತರ ಕೊಡುವನು/ಕೊಡುವಳು. | ೨ |
| ಕವಿತೆ ಕೇಳದ ನಂತರ ಕೇವಲ ಒಂದೇ ಒಂದು ಪ್ರಶ್ನೆಗೆ ಉತ್ತರ ಕೊಡುವನು/ಕೊಡುವಳು. | ೧ |
| ಕವಿತೆ ಕೇಳಿದ ನಂತರ ಪ್ರಶ್ನೆಗಳಿಗೆ ಉತ್ತರ ಕೊಡುವಾಗ ಸಂಕುಚಿತಗೊಳ್ಳುವದು ಅಥವಾ ಯಾವುದೇ ಪ್ರಶ್ನೆಗಳಿಗೆ ಯೋಗ್ಯ ಉತ್ತರ ಕೊಡಲು ಶಕ್ಯವಾಗಲಿಲ್ಲ. | ೦ |

**ಅಧ್ಯಯನ ನಿಷ್ಪತ್ತಿ ಕ್ರ. ೨ :** ಸರಿಯಾದ ಗತಿಯಿಂದ ಯೋಗ್ಯ ಲಯಬದ್ಧದಿಂದ ಪರಿಚಿತ ಇರುವ ಪರಿಚ್ಛೇದ ಓದುವದು. (LM 407)

**ಶಿಕ್ಷಕರ ಸಲುವಾಗಿ ಸೂಚನೆ :**

- ಶಿಕ್ಷಕರು ಮಕ್ಕಳಿಗೆ ಗದ್ಯಭಾಗವಿರುವ ಕಾರ್ಡಶೀಟ್ ಕೊಡಿರಿ.
- ಮಕ್ಕಳಿಗೆ ಗದ್ಯಭಾಗ ಲಕ್ಷ್ಯಪೂರ್ವಕ ಓದಲು ಹೇಳುವದು ಹಾಗೂ ಗದ್ಯಭಾಗ ವಾಚನ ಮಾಡಿದ ನಂತರ ಪ್ರಶ್ನೆಗಳನ್ನು ಕೇಳುತ್ತೇನೆಂದು ವಿದ್ಯಾರ್ಥಿಗಳಿಗೆ ಸೂಚನೆ ಕೊಡಿರಿ.
- ವಿದ್ಯಾರ್ಥಿ ಒಂದು ಶಬ್ದವಾಚನ ಮಾಡಲು ೫ ಸೆಕೆಂಡುಗಳಿಗಿಂತ ಹೆಚ್ಚು ಸಮಯ ಓದದೆ ನಿಂತರೆ ಆತನಿಗೆ ಮುಂದಿನ ಶಬ್ದವಾಚನ ಮಾಡಲು ಹೇಳಿರಿ.

**ಚಿಹ್ನೆ ಸಂಕೇತ :**

೧) ತಪ್ಪು ವಾಚನ ಮಾಡಿದ ಅಥವಾ ವಾಚನ ಮಾಡದೇ ಇರುವ ಶಬ್ದ (/) ಈ ಚಿಹ್ನೆಯಿಂದ ಗುರುತು ಮಾಡಿರಿ.

೨) ಯೋಗ್ಯ ಪ್ರಕಾರ ವಾಚನ ಮಾಡಿದ ಶಬ್ದಗಳಿಗೆ (∅) ಈ ಪ್ರಕಾರ ಗುರುತು ಮಾಡಿರಿ.

**ಪರಿಚ್ಛೇದ ವಾಚನ :**

ಹಂಚಿನ ಕೆಳಗೆ ಗೋಡೆಯ ಮೇಲೆ ಸ್ವಲ್ಪ ಬರಿದಾದ ಜಾಗ ಇತ್ತು. ಒಂದು ದಿವಸ ಅಲ್ಲಿ ಗುಬ್ಬಿಯು ತನ್ನ ಗೂಡನ್ನು ಕಟ್ಟಲು ಪ್ರಾರಂಭ ಮಾಡಿತು. ಹುಲ್ಲು, ಕಡ್ಡಿ, ಕಸ, ಹತ್ತಿ ಚುಂಚಿನಲ್ಲಿ ಹಿಡಿದುಕೊಂಡು ಬರುವದು, ಹೋಗುವದು ಕಾಣಿಸತೊಡಗಿತು. ಬಿರುಕಿನಿಂದ ಗೋಡೆಯ ಮೇಲೆ ಹುಲ್ಲು ನೇತಾಡುವದು ಕಾಣಿಸತೊಡಗಿತು. ಗುಬ್ಬಿಯು ಅಲ್ಲಿ ತತ್ತಿ ಹಾಕಿರಬಹುದು. ಒಂದು ದಿವಸ ಗೋಡೆಯ ಮೇಲಿಂದ ಚಿಂವ್ ಚಿಂವ್ ಕೇಳಿಬಂದಿತು. ಗುಬ್ಬಿಯ ಮರಿಗಳು ದಿನವಿಡೀ ಕಿರಿಚುತ್ತಿದ್ದವು. ಗುಬ್ಬಿ ಮರಿಗಳಿಗೆ ತಿನ್ನಿಸುತ್ತಿತ್ತು. ಬಹಳ ದಿನಗಳು ಗತಿಸಿದವು. ಒಮ್ಮೆ ಒಂದು ದಿವಸ ಸಹಜವಾಗಿ ಗುಬ್ಬಿಯ ಮರಿಗಳ ಧ್ವನಿ ಬರುವದು ನಿಂತಿತು. ಗುಬ್ಬಿ ಹಾಗೂ ಗುಬ್ಬಕ್ಕಾ ಗೂಡಿಗೆ ಬರುವದು ನಿಂತಿತು. ನಿಚ್ಚಣಿಕೆ ಹಚ್ಚಿ ಗೋಡೆಯ ಮೇಲೆ ನೋಡಿದಾಗ ಗುಬ್ಬಿ ಗೂಡು ಬರಿದಾಗಿತ್ತು.

**ಮೌಲ್ಯಮಾಪನದ ರುಬ್ರಿಕ :**

| ವಿವರಣೆ | ಶ್ರೇಣಿ |
|---|---|
| ೫೦ ರಿಂದ ೭೦ ಶಬ್ದಗಳನ್ನು ತಪ್ಪದೇ ಓದುವನು/ಓದುವಳು. | ೩ |
| ೪೯ ರಿಂದ ೨೫ ಶಬ್ದಗಳನ್ನು ಸರಿಯಾಗಿ ವಾಚನ ಮಾಡುವನು/ಮಾಡುವಳು. | ೨ |
| ೫ ರಿಂದ ೨೪ ಶಬ್ದಗಳನ್ನು ಸರಿಯಾಗಿ ಓದಿದ ಅಥವಾ ಸ್ವಪ್ರಯತ್ನದಿಂದ ಸುಧಾರಿಸಿಕೊಳ್ಳುತ್ತ ತಡೆತಡೆದು ಓದುವನು. | ೧ |
| ೫ ಕ್ಕಿಂತ ಕಡಿಮೆ ಶಬ್ದಗಳನ್ನು ಸ್ವಪ್ರಯತ್ನದಿಂದ ಸುಧಾರಣೆ ಮಾಡುತ್ತ ಸಾವಕಾಶ ಓದುವನು. | ೦ |

**ಅಧ್ಯಯನ ನಿಷ್ಪತ್ತಿ ಕ್ರ. ೩ :** ಸಾಹಿತ್ಯ ಪ್ರಕಾರದಲ್ಲಿಯ ವಿಷಯ, ಘಟನೆ, ಚಿತ್ರ, ಪಾತ್ರ, ತಲೆಬರಹ ಈ ವಿಷಯಗಳ ಬಗ್ಗೆ ಚರ್ಚೆ ಮಾಡುವದು, ಪ್ರಶ್ನೆ ಕೇಳುವದು, ತಮ್ಮ ಅಭಿಪ್ರಾಯ ವ್ಯಕ್ತಪಡಿಸುವದು ಹಾಗೂ ಅದನ್ನು ಪರಿಶೀಲಿಸಿ ಹೇಳುವಾಗ ಅದರ ಹಿಂದಿನ ಉದ್ದೇಶ ಹೇಳುವದು.

**ಶಿಕ್ಷಕರ ಸಲುವಾಗಿ ಸೂಚನೆ :**

- ವಿದ್ಯಾರ್ಥಿಯು ಕಥೆಯನ್ನು ಓದುವುದನ್ನು ನಿಲ್ಲಿಸಿದಾಗ ಆತನ ಎದುರು ಇಟ್ಟಿರುವ ಕಥೆಯ ಸಾಹಿತ್ಯವನ್ನು ತೆಗೆಯಬೇಡಿರಿ.
- ಒಬ್ಬ ವಿದ್ಯಾರ್ಥಿಯು ಕಥೆಯನ್ನು ವಾಚನ ಮಾಡಿದರೆ, ಕಥೆಯ ಮೇಲೆ ಆಧರಿಸಿದ ಒಂದೊಂದು ಪ್ರಶ್ನೆಗಳನ್ನು ಕೇಳಿರಿ. ಒಂದುವೇಳೆ ವಿದ್ಯಾರ್ಥಿಯು ೧೫ ಸೆಕೆಂಡುಗಳಲ್ಲಿ ಉತ್ತರಿಸಲು ಅಸಮರ್ಥನಾದರೆ ಆ ಪ್ರಶ್ನೆಗೆ ನಿರುತ್ತರ ಎಂದು ಗುರುತು ಮಾಡಿರಿ ಮತ್ತು ಮುಂದೆ ಸಾಗಿರಿ.
- ಪ್ರಶ್ನೆ ಎರಡಕ್ಕಿಂತ ಹೆಚ್ಚು ಬಾರಿ ಕೇಳಬೇಡಿ. ಒಂದು ವೇಳೆ ವಿದ್ಯಾರ್ಥಿಯು ನನಗೆ ಗೊತ್ತಿಲ್ಲ ಅಂದಾಗ ಪರ್ಯಾಯ ೦/ ತಪ್ಪು ಗುರುತು ಮಾಡಿರಿ.

| ಪ್ರಶ್ನೆ | ಉತ್ತರ |
|---|---|
| ೧) ಗುಬ್ಬಿಯು ತನ್ನ ಗೂಡನ್ನು ಎಲ್ಲಿ ಕಟ್ಟಿತು ? | ಕೆಳಗಿನ ಗೋಡೆಯ ಮೇಲೆ |
| ೨) ಗುಬ್ಬಿ ಗೂಡು ಕಟ್ಟಲು ಏನೇನು ಸಂಗ್ರಹಿಸಿತು ? | ಹುಲ್ಲು, ಹತ್ತಿ, ಕಡ್ಡಿಗಳು |
| ೩) ಗುಬ್ಬಿಯು ಗೂಡನ್ನು ಯಾವುದರ ಸಲುವಾಗಿ ಕಟ್ಟಿತು ? | ಮರಿಗಳ ಸಲುವಾಗಿ ಮತ್ತು ತತ್ತಿ ಇಡುವ ಸಲುವಾಗಿ |
| ೪) ಮರಿಗಳ ಜನ್ಮವಾಗಿದೆ ಎಂಬುದನ್ನು ಕಥೆಯಲ್ಲಿಯ ಯಾವ ವಾಕ್ಯಗಳಿಂದ ಕಂಡು ಬರುವದು ಅಥವಾ ತಿಳಿಯುವದು ? | ಒಂದು ದಿನ ಗೋಡೆಯ ಮೇಲಿಂದ ಚಿಂವ್ ಚಿಂವ್ ಧ್ವನಿಯ ಸಪ್ಪಳ ಕೇಳಿಸಿತು. |
| ೫) ಮರಿಗಳ ಚಿಂವ್ ಚಿಂವ್ ಧ್ವನಿಯ ಸಪ್ಪಳ ಒಮ್ಮಿಂದೊಮ್ಮೆ ಏಕೆ ನಿಂತು ಹೋಯಿತು ? | ಮರಿ ದೊಡ್ಡದಾಯಿತು ಹಾಗೂ ಹಾರಿ ಹೋಯಿತು. ಅದರಿಂದ ಸಪ್ಪಳ ಬರುವದು ನಿಂತಿತು. (ಆಶಯಕ್ಕೆ ಸಮರ್ಪಕವಾದ ಉತ್ತರ ಸಹಿತ ಸ್ವೀಕರಿಸಿರಿ.) |

ವಿದ್ಯಾರ್ಥಿಗಳು ಕೊಟ್ಟ ಸರಿಯಾದ ಉತ್ತರಗಳ ಸಂಖ್ಯೆ ........./೫.

**ಮೌಲ್ಯಮಾಪನದ ರುಬ್ರಿಕ :**

| ವಿವರಣೆ | ಶ್ರೇಣಿ |
|---|---|
| ಗದ್ಯಭಾಗ ಓದಿದ ನಂತರ ೪ ರಿಂದ ೫ ಪ್ರಶ್ನೆಗಳಿಗೆ ಯೋಗ್ಯ ಉತ್ತರ ಕೊಡುವನು/ಕೊಡುವಳು. | ೩ |
| ಗದ್ಯಭಾಗ ಓದಿದ ನಂತರ ೨ ರಿಂದ ೩ ಪ್ರಶ್ನೆಗಳಿಗೆ ಯೋಗ್ಯ ಉತ್ತರ ಕೊಡುವನು/ಕೊಡುವಳು. | ೨ |
| ಗದ್ಯಭಾಗ ಓದಿದ ನಂತರ ಕೇವಲ ಒಂದೇ ಪ್ರಶ್ನೆಗೆ ಯೋಗ್ಯ ಉತ್ತರ ಕೊಡುವನು/ಕೊಡುವಳು. | ೧ |
| ಗದ್ಯಭಾಗ ಓದಿದ ನಂತರ ಪ್ರಶ್ನೆಗಳಿಗೆ ಉತ್ತರ ಕೊಡುವಾಗ ಸಂಕೋಚ ಪಟ್ಟುಕೊಳ್ಳುವದು ಅಥವಾ ಯಾವುದೇ ಪ್ರಶ್ನೆಗಳಿಗೆ ಯೋಗ್ಯ ಉತ್ತರ ಕೊಡಲಾಗುವದಿಲ್ಲ. | ೦ |

**ಅಧ್ಯಯನ ನಿಷ್ಪತ್ತಿ ಕ್ರ. ೪ :** ಬೇರೆ ಪ್ರಕಾರದ ಲಿಖಿತ ಸಾಹಿತ್ಯ – ಉದಾ. ವರ್ತಮಾನ ಪತ್ರ, ಬಾಲ ಮಾಸಿಕಗಳನ್ನು ಓದುತ್ತಾನೆ, ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತಾನೆ ಮತ್ತು ಅದರ ಬಗ್ಗೆ ಸಂಕ್ಷಿಪ್ತದಲ್ಲಿ ಮಾಹಿತಿ ಬರೆಯುವದು. (LM 407)

**ಶಿಕ್ಷಕರ ಸಲುವಾಗಿ ಸೂಚನೆ :**

- ಶಿಕ್ಷಕರು ಮಕ್ಕಳಿಗೆ ಗದ್ಯಭಾಗ ಇರುವ ಕಾರ್ಡಶೀಟ್ ಓದಲು ಕೊಡಿರಿ.
- ಮಕ್ಕಳಿಗೆ ಗದ್ಯಭಾಗ ಕಾಳಜಿಪೂರ್ವಕವಾಗಿ ಓದಲು ಹೇಳಿರಿ ಹಾಗೂ ಗದ್ಯಭಾಗ ಓದಿದ ನಂತರ ಪ್ರಶ್ನೆಗಳನ್ನು ಕೇಳುತ್ತೇನೆ ಎಂದು ಸೂಚನೆ ಕೊಡಿರಿ.
- ವಿದ್ಯಾರ್ಥಿ ಒಂದು ಶಬ್ದವಾಚನ ಮಾಡಲು ೫ ಸೆಕೆಂಡುಗಳಿಗಿಂತ ಹೆಚ್ಚು ಸಮಯ ಉಚ್ಚರಿಸುತ್ತ ನಿಂತರೆ ಆತನಿಗೆ ಮುಂದಿನ ಶಬ್ದವಾಚನ ಮಾಡಲು ಹೇಳಿರಿ.

**ಚಿಹ್ನೆ ಗುರುತು :**

೧) ತಪ್ಪು ವಾಚನ ಮಾಡಿದ ಅಥವಾ ವಾಚನ ಮಾಡದೆ ಇರುವ ಶಬ್ದ (/) ಈ ಚಿಹ್ನೆಯಿಂದ ಗುರುತು ಮಾಡಿರಿ.

೨) ಯೋಗ್ಯ ಪ್ರಕಾರವಾಗಿ ವಾಚನ ಮಾಡಿದ ಶಬ್ದಗಳಿಗೆ (∅) ಈ ರೀತಿ ಚಿಹ್ನೆಯ ಗುರುತು ಮಾಡಿರಿ.

**ಪರಿಚ್ಛೇದ ವಾಚನ :**

**ಬಾಜಾರದಲ್ಲಿಯ ವಾಹನಗಳ ರಹದಾರಿಯಿಂದ ಜನರಿಗೆ ತೊಂದರೆ**

ದುಧಾ, ತಾ. ಆಂಬೇಗಾಂವ. ದಿನಾಂಕ ೭ ಮೇ (ನಮ್ಮ ವರದಿಗಾರರಿಂದ) ಆಂಬೇಗಾಂವ ತಾಲೂಕಿನಲ್ಲಿ ದುಧಾ ಈ ಊರಿನಲ್ಲಿ ಪ್ರತಿ ಶನಿವಾರಕ್ಕೊಮ್ಮೆ ವಾರದ ಸಂತೆ ತುಂಬುತ್ತದೆ. ಈ ಸ್ಥಳದಲ್ಲಿ ದನಗಳ ಬಾಜಾರ ಜಿಲ್ಲೆಯಲ್ಲಿ ಎಲ್ಲಕ್ಕಿಂತ ದೊಡ್ಡ ಪ್ರಮಾಣದಲ್ಲಿ ತುಂಬುವದು. ಈ ಊರಿನ ಸುತ್ತಮುತ್ತಲಿನ ಊರಿನ ಜನರು ಈ ಬಾಜಾರಕ್ಕೆ ಬರುತ್ತಾರೆ. ಆ ಬಾಜಾರದ ಮುಖ್ಯ ರಸ್ತೆಯ ಎರಡು ಬದಿಗೆ ಚಿಕ್ಕ ಪುಟ್ಟ ಅಂಗಡಿಗಳು ಇದ್ದುದ್ದರಿಂದ ಬಹಳಷ್ಟು ದಟ್ಟಣೆ ಆಗುವದು. ಅದೇ ರಸ್ತೆಯಿಂದ ದ್ವಿಚಕ್ರ ವಾಹನ, ನಾಲ್ಕು ಚಕ್ರ ವಾಹನಗಳ ಓಡಾಟ ಇರುವುದರಿಂದ ಆ ಜನರ ಹಾಗೂ ವ್ಯಾಪಾರ ದಟ್ಟಣೆಯಲ್ಲಿ ಮತ್ತಷ್ಟು ಹೆಚ್ಚಿಗೆ ದಟ್ಟಣೆ ಆಗುತ್ತದೆ. ಈ ದಟ್ಟಣೆ ಕಡಿಮೆ ಮಾಡುವ ಸಲುವಾಗಿ ಪ್ರಯತ್ನವಾಗಬೇಕು ಎಂಬ ಅಪೇಕ್ಷೆಯನ್ನು ಜನರು ಆಡಳಿತ ಮಂಡಳಿ ಕಡೆಗೆ ಆಹ್ವಾನಿಸಿದ್ದಾರೆ ಎಂಬ ಮಾಹಿತಿಯನ್ನು ಅಲ್ಲಿಯ ಸ್ಥಾನಿಕ ಜನಪ್ರತಿನಿಧಿಗಳು ಕೊಟ್ಟಿದ್ದಾರೆ.

ವಿದ್ಯಾರ್ಥಿಗಳು ತಪ್ಪದೇ ವಾಚನ ಮಾಡಿದ ಶಬ್ದಗಳ ಸಂಖ್ಯೆ ............/೭೦.

ವಾಚನ ಪೂರ್ಣ ಮಾಡುವ ಸಲುವಾಗಿ ಬೇಕಾಗುವ ವೇಳೆ ............. ಸೆಕೆಂಡುಗಳು.

| ಪ್ರಶ್ನೆ | ಉತ್ತರ |
|---|---|
| ೧) ವಾರ್ತೆಗೆ ಕೊಟ್ಟ ತಲೆಬರಹ ಹೇಳಿರಿ. | ಬಾಜಾರದಲ್ಲಿಯ ವಾಹನಗಳ ರಹದಾರಿಯಿಂದ ಜನರಿಗೆ ತೊಂದರೆ |
| ೨) ಬಾಜಾರದಲ್ಲಿ ದಟ್ಟಣೆ ಆಗಲು ಕಾರಣಗಳೇನು ? | ಮುಖ್ಯ ರಸ್ತೆಯ ಎರಡೂ ಬದಿಗೆ ಚಿಕ್ಕ ಚಿಕ್ಕ ಅಂಗಡಿಗಳಿದ್ದುದರಿಂದ |
| ೩) ಬಾಜಾರದಲ್ಲಿಯ ಅಡಚಣೆಯ ಬಗ್ಗೆ ಯಾರಿಗೆ ತಕರಾರು ಮಾಡಿದ್ದಾರೆ ? | ಆಡಳಿತ ಮಂಡಳಿಯ ಕಡೆಗೆ |
| ೪) ಸಾಪ್ತಾಹಿಕ ಬಾಜಾರ ಅಂದರೆ ಏನು ? | ಒಂದು ವಾರಕ್ಕೊಮ್ಮೆ ತುಂಬುವ ಸಂತೆ (ಬಾಜಾರ) |
| ೫) ಬಾಜಾರದಲ್ಲಿಯ ದಟ್ಟಣೆ ಕಡಿಮೆ ಆಗುವ ಸಲುವಾಗಿ ಏನು ಮಾಡಬೇಕೆಂದು ನಿನಗೆ ಅನ್ನಿಸುವದು ? | ಸಮರ್ಪಕ ಉತ್ತರ ಸ್ವೀಕರಿಸಿರಿ. |

**ಮೌಲ್ಯಮಾಪನದ ರುಬ್ರಿಕ :**

| ವಿವರಣೆ | ಶ್ರೇಣಿ |
|---|---|
| ಪರಿಚ್ಛೇದ ವಾಚನ ಮಾಡಿದ ನಂತರ ಎಲ್ಲ ಪ್ರಶ್ನೆಗಳಿಗೆ ಉತ್ತರ ಕೊಡುವನು/ಕೊಡುವಳು. | ೩ |
| ಪರಿಚ್ಛೇದ ವಾಚನ ಮಾಡಿದ ನಂತರ ೨-೩ ಪ್ರಶ್ನೆಗಳಿಗೆ ಯೋಗ್ಯ ಉತ್ತರ ಕೊಡುವನು/ಕೊಡುವಳು. | |
| ಪರಿಚ್ಛೇದ ವಾಚನ ಮಾಡಿದ ನಂತರ ಕೇವಲ ಒಂದೇ ಪ್ರಶ್ನೆಗೆ ಉತ್ತರ ಕೊಡುವನು/ಕೊಡುವಳು. | ೧ |
| ಪರಿಚ್ಛೇದ ವಾಚನ ಮಾಡಿದ ನಂತರ ಪ್ರಶ್ನೆಗಳಿಗೆ ಉತ್ತರ ಕೊಡಲು ಸಂಕೋಚ ಮಾಡುವದು ಅಥವಾ ಯಾವುದೇ ಪ್ರಶ್ನೆಗೆ ಯೋಗ್ಯ ಉತ್ತರ ಕೊಡುವದು ಆಗಲಿಲ್ಲ. | ೦ |

**ಅಧ್ಯಯನ ನಿಷ್ಪತ್ತಿ ಕ್ರ. ೫ :** ಲೇಖನ (ECL1.6.9)-ಚಿಕ್ಕ ವಾಕ್ಯಗಳನ್ನು ವಿರಾಮ ಚಿಹ್ನೆಗಳ ಸಹಿತ ಲೇಖನ ಮಾಡುವದು. (LM 417)

**ಶಿಕ್ಷಕರ ಸಲುವಾಗಿ ಸೂಚನೆ :**

- ಶೃತ ಲೇಖನದ ಪರಿಚ್ಛೇದ ತೆಗೆದುಕೊಳ್ಳುವಾಗ ವಿದ್ಯಾರ್ಥಿಗಳಿಗೆ ತಿಳಿಯುವಂತೆ ಉಚ್ಚರಿಸಲು ಹಾಗೂ ವೇಗವಾಗಿ ಶಬ್ದ ಹೇಳಲು ಬರಬೇಕು.
- ಒಂದೇ ವಾಕ್ಯ ಮೂರು ಸಲ ವಾಚನ ಮಾಡಿರಿ.
  - ೧) ಮೊದಲಿನ ವಾಚನದ ಸಮಯದಲ್ಲಿ ಮಕ್ಕಳಿಗೆ ಕೇವಲ ಕೇಳಲು ಹೇಳಿರಿ.
  - ೨) ಎರಡನೆಯ ಸಲ ವಾಚನ ಮಾಡಿದ ನಂತರ ಬರೆಯಲು ಹೇಳಿರಿ ಹಾಗೂ ಬೇಕಾದಷ್ಟು ಸಮಯ ಕೊಡಿರಿ.
  - ೩) ಮೂರನೆಯ ಸಲ ವಾಚನ ಮಾಡಿದ ನಂತರ ಮಕ್ಕಳಿಗೆ ವಾಕ್ಯ ಮತ್ತೆ ನೋಡಲು ಹೇಳಿರಿ.

**ಲೇಖನ ಪರಿಚ್ಛೇದ :**

ಒಂದು ದಿವಸ ಕೇಶವರಾಯನು ತಮ್ಮ ಮಕ್ಕಳಿಗೆ ಎರಡು-ಎರಡು ರೂಪಾಯಿ ಕೊಟ್ಟನು. ಮಕ್ಕಳಿಗೆ ಆನಂದವಾಯಿತು. ಕೇಶವರಾಯನು ಅಂದನು, ''ಈ ಹಣದಿಂದ ನೀವು ಮನೆ ತುಂಬುವಷ್ಟು ವಸ್ತುಗಳನ್ನು ತರುತ್ತೀರಾ ?''

**ಮೌಲ್ಯಮಾಪನದ ರುಬ್ರಿಕ :**

| ವಿವರಣೆ | ಶ್ರೇಣಿ |
|---|---|
| ಎಲ್ಲ ಶಬ್ದ/ವಾಕ್ಯಗಳನ್ನು ತಪ್ಪದೇ ಹಾಗೂ ವಿರಾಮ ಚಿಹ್ನೆಗಳೊಂದಿಗೆ ಲೇಖನ ಮಾಡುವನು/ಮಾಡುವಳು. | ೩ |
| ಎಲ್ಲ ಶಬ್ದಗಳು/ವಾಕ್ಯಗಳು ತಪ್ಪದೇ ಸರಿಯಾಗಿ ಲೇಖನ ಆದರೂ ಲೇಖನದಲ್ಲಿ ವಿರಾಮ ಚಿಹ್ನೆಗಳ ಉಪಯೋಗ ಇಲ್ಲ. | ೨ |
| ಎಲ್ಲ ವಾಕ್ಯಗಳ ಲೇಖನ ಮಾಡಲಾಗಿ ೪ ರಿಂದ ೫ ಶಬ್ದಗಳ ಲೇಖನ ಸರಿಯಾಗಿ ಇರುವದಿಲ್ಲ. | ೧ |
| ಒಂದು ಸರಿ ಇರುವುದಿಲ್ಲ. | ೦ |

❑❑❑